ಕ್ರ. ಸಂ.	ಪತ್ರಿಕೆ	ಪರಿಷ್ಕರಣೆಗೆ ಮುಂಚೆ ಇದ್ದ ಜಾಹೀರಾತು ದರ ಪ್ರ.ಕಾ. ಸೆಂ.ಮೀ ಗೆ ರೂ.ಗಳಲ್ಲಿ	ಪರಿಷ್ಕರಣೆಯ ನಂತರ ನಿಗದಿಯಾದ ಜಾಹೀರಾತು ದರ ಪ್ರ.ಕಾ. ಸೆಂ. ಮೀ. ರೂ. ಗಳಲ್ಲಿ	ಪ್ರಸಾರ ಸಂಖ್ಯೆ
12.	ಅಶೋಕ	10-00	11-00	2150
13.	ಟಿಪ್ಪುಮೈಲ್	18-50	21-00	3500
14.	ಡೈಲಿಕೌಸರ್	14-00	15-00	2325
15.	ಷಮ್ಸ್	14-50	16-00	2440
16.	ಅಪ್ತಾರ್-ಇ-ಕರ್ನಾಟಕ	14-00	15-00	2500
17.	ಸ್ಟಾರ್ ಆಫ್ ಮೈಸೂರು	12-50	14-00	11000
18.	ಮಿನೊನ್ಯೂಸ್	12-50	14-00	3300
19.	ಸಮಾಚಾರ	12-50	14-00	2163
20.	ಮೈಸೂರು ಮಿತ್ರ	18-50	21-00	11450
21.	ಸಂಜ್‌ಸಮಾಚರ್	18-00	21-00	9555
22.	ಮೈಸೂರು ದಿಗಂತ	18-50	21-00	10800
23.	ವಿಜಯ	14-50	16-00	1000
24.	ಸುದ್ದಿ ಸಂಭ್ರಮ	18-00	20-00	2000

ಅರಣ್ಯ ಇಲಾಖೆಯಲ್ಲಿ ಗಿಡಗಳನ್ನು ನೆಡುವ ಕಾರ್ಯ

4985 - ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *1999-2000ನೇ ಸಾಲಿನಲ್ಲಿ ಅರಣ್ಯ ಇಲಾಖೆಯಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ?*
2. *ಗಿಡಗಳನ್ನು ನೆಡಲು, ಇತರೆ ಕೆಲಸಗಳಿಗೆ ಹಾಗೂ ನೌಕರಿ ವರ್ಗದವರಿಗೆ ಆದ ವೆಚ್ಚವೆಷ್ಟು?*
3. *ಇದರಿಂದ ಬರುವ ಆದಾಯ ವರ್ಷಕ್ಕೆ ಎಷ್ಟು?*

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

1. ರೂ. 29,965.74 ಲಕ್ಷ
2. 1999-2000ನೇ ಸಾಲಿನ ವೆಚ್ಚದ ವಿವರಗಳು ಕೆಳಗಿನಂತಿದೆ.

ಅ) ಗಿಡಗಳನ್ನು ನೆಡಲು ರೂ. 22,068.55 ಲಕ್ಷ ಮತ್ತು ಇತರ ಕೆಲಸಗಳಿಗೆ

ಆ) ನೌಕರ ವರ್ಗದವರಿಗೆ ರೂ. 7,897.19 ಲಕ್ಷ.

3. ಅರಣ್ಯ ಇಲಾಖೆಯ ಕಳೆದ ಮೂರು ವರ್ಷಗಳ ಆದಾಯದ ವಿವರಗಳು ಕೆಳಗಿನಂತಿದೆ.

ವರ್ಷ	ಆದಾಯ (ಲಕ್ಷ ರೂ.ಗಳಲ್ಲಿ)
1997-98	11,334.55
1998-99	10,685.96
1999-2000	9,391.22

ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಪುನರ್ ನೇಮಕಗೊಂಡಿರುವ ಕಾರ್ಮಿಕರಿಗೆ ರಜಾ ಸೌಲಭ್ಯ

4986 - ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಾಕೊಂಡ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಇಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ಪುನರ್ ನೇಮಕಗೊಂಡಿರುವ ಕಾರ್ಮಿಕರಿಗೆ ರಜಾ ಸೌಲಭ್ಯ ಕೊಡುವಲ್ಲಿ ತಾರತಮ್ಯವನ್ನು ಆಡಳಿತ ವರ್ಗದವರು ಮಾಡುತ್ತಿರುವ ಬಗ್ಗೆ ಚಿತ್ರದುರ್ಗ ಡಿಸ್ಟ್ರಿಕ್ಟ್ ಮಜ್ದೂರ್ ಸಂಘ ದಾವಣಗೆರೆ ಇವರು ಸಹಾಯಕ ಕಾರ್ಮಿಕ ಆಯುಕ್ತರು ದಾವಣಗೆರೆ ಇವರ ಗಮನ ಸೆಳೆದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸದರಿ ಅಧಿಕಾರಿಯವರು ತೆಗೆದುಕೊಂಡಿರುವ ಕ್ರಮಗಳೇನು?

ಇ) ಪುನರ್ ನೇಮಕಗೊಂಡಿರುವ ಕಾರ್ಮಿಕರಿಗೆ ಕಾನೂನಿನ ಪ್ರಕಾರ ಸಿಗಬೇಕಾಗಿರುವ ಸೌಲಭ್ಯಗಳೇನು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ನಿಜವಲ್ಲ.

ಆ) ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪುನರ್ ನೇಮಕಗೊಂಡಿರುವ ಕಾರ್ಮಿಕರಿಗೆ ಕೆಳಗೆ ನಮೂದಿಸಿದ ಆಯಾಯಾ ಕಾನೂನಿನಡಿಯಲ್ಲಿ ಈ ಕೆಳಕಂಡ ಸೌಲಭ್ಯಗಳು ದೊರೆಯುತ್ತವೆ.

1. ಕಾರ್ಖಾನೆ ಕಾಯ್ದೆ 1948ರಡಿಯಲ್ಲಿ ರಜೆ, ಕ್ಯಾಂಟೀನ್, ವೈದ್ಯಕೀಯ ಇತ್ಯಾದಿ ಸೌಲಭ್ಯಗಳು.

2. ಬೋನಸ್ ಪಾವತಿ ಕಾಯ್ದೆ 1965ರಡಿ ವಾರ್ಷಿಕ ಬೋನಸ್